# www.karunaduexams.com

ಗ್ರಾ ಪಂ ಅ ಅಧಿಕಾರಿ ಮತ್ತು ಕಾರ್ಯದರ್ಶಿ ಗ್ರೇಡ್-1 ಕ್ವಿಜ್-14

www.karunaduexams.com

1. ಗ್ರಾಮ ಪಂಚಾಯಿತಿಯಲ್ಲಿ ಸಾಮಾನ್ಯ ಸಭೆಯನ್ನು ಕರೆಯುವ ಅಧಿಕಾರ ಮತ್ತು ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸಿಕೊಳ್ಳುತ್ತಾರೆ?
   ಅ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ-ಅಧ್ಯಕ್ಷರು
   ಆ. ಅಧ್ಯಕ್ಷರು- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಇ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   **ಈ. ಅಧ್ಯಕ್ಷರು-ಅಧ್ಯಕ್ಷರು**

2. ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳಲ್ಲಿ ತಪ್ಪಾದುದನ್ನು ಗುರುತಿಸಿ:
   ಅ. ಅಧ್ಯಕ್ಷರು ಸಾಮಾನ್ಯ ಸಭೆ ನಡೆಸಲು ವಿಫಲವಾದಲ್ಲಿ 1/3 ಸದಸ್ಯರು ಸಹಿ ಮಾಡಿದ ಸೂಚನೆಯನ್ನು ಉಪಾಧ್ಯಕ್ಷರಿಗೆ ನೀಡಿ ಸಭೆಯನ್ನು ಕರೆಯಬಹುದು
   **ಆ.** ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಗೆ ತಾಲೂಕು ಪಂಚಾಯಿತಿ ಸದಸ್ಯರು ಕಡ್ಡಾಯವಾಗಿ ಹಾಜರಾಗುವಂತೆ ನೋಟೀಸ್ ನೀಡಬೇಕು
   ಇ. ಸಾಮಾನ್ಯ ಸಭೆಯಲ್ಲಿ ಒಮ್ಮೆ ಕೈಗೊಂಡ ನಿರ್ಣಯವನ್ನು 6 ತಿಂಗಳವರೆಗೂ ಬದಲಾಯಿಸುವ ಹಾಗಿಲ್ಲ
   ಈ. ಗ್ರಾಮ ಪಂಚಾಯಿತಿ ಠರಾವು ಪುಸ್ತಕಕ್ಕೆ ಅಧ್ಯಕ್ಷರು ಮಾತ್ರ ಸಹಿ ಮಾಡುತ್ತಾರೆ
   ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಗೆ ತಾಲೂಕು ಪಂಚಾಯಿತಿ ಸದಸ್ಯರು ಕಡ್ಡಾಯವಾಗಿ ಹಾಜರಾಗುವಂತೆ ನೋಟೀಸ್ ನೀಡಬೇಕು

**3.** ನಾಗರಿಕ ಸೇವಾ ಖಾತರಿ ಅಧಿನಿಯಮದ ರೀತ್ಯಾ ಗ್ರಾಮ ಪಂಚಾಯಿತಿಗಳಲ್ಲಿ ಒಟ್ಟು ಎಷ್ಟು ನಾಗರಿಕ ಸೇವೆ ಒದಗಿಸಲಾಗುತ್ತಿದೆ?
   ಅ. 9
   ಆ. 10
   ಇ. 11
   ಈ. 15
   **11**

4. ಈ ಕೆಳಗಿನ ವಸತಿ ಯೋಜನೆಗಳಲ್ಲಿ ಸದ್ಯ (2016-17) ಚಾಲ್ತಿಯಲ್ಲಿರದ ವಸತಿ ಯೋಜನೆ ಯಾವುದು?
   ಅ. ಬಸವ ವಸತಿ ಯೋಜನೆ
   ಆ. ಇಂದಿರಾ ಆವಾಸ್ ಯೋಜನೆ
   ಇ. ಡಾ. ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆ
   ಈ. ಪ್ರಧಾನ ಮಂತ್ರಿ ಆವಾಸ್ ಯೋಜನೆ
   ಆ. ಇಂದಿರಾ ಆವಾಸ್ ಯೋಜನೆ

5. ಈರಮ್ಮ ಭಕ್ತರಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ಹಿಂದುಳಿದ ವರ್ಗಕ್ಕೆ ಸೇರಿದವಳಾಗಿದ್ದು, ಬಸವ ವಸತಿ ಯೋಜನೆಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗಿರುತ್ತಾಳೆ. ಈರಮ್ಮ ವಸತಿ ಯೋಜನೆಯ ಸಹಾಯ ಧನ ಹೊರತಾಗಿ ಈ ಕೆಳಕಂಡ ಯಾವ ಇತರೆ ಸಹಾಯ ಧನ/ಮೊತ್ತವನ್ನು ಪಡೆಯಲು ಅರ್ಹಳಾಗಿದ್ದಾಳೆ?
   ಅ. ನರೇಗ (MGNREGA) ಅಡಿ ಕೂಲಿ ಮೊತ್ತ ರೂ. 15000-00 ಮತ್ತು ಸ್ವಚ್ಛ ಭಾರತ ಮಿಷನ್ ರೂ. 12000-00
   ಆ. ಗ್ರಾಮ ಪಂಚಾಯಿತಿ ವಂತಿಗೆ ರೂ. 10000-00 ಮತ್ತು ಸ್ವಚ್ಛ ಭಾರತ ಮಿಷನ್ ರೂ. 15000-00


www.karunaduexams.com

ಇ. ನರೇಗ (MGNREGA) ಅಡಿ ಕೂಲಿ ಮೊತ್ತ ರೂ. 20160-00 ಮತ್ತು ಸ್ವಚ್ಛ ಭಾರತ ಮಿಷನ್ ರೂ. 12000-00

ಈ. ಅಹಿಂದ ಸಹಾಯ ಧನ ರೂ. 15000-00 ಮತ್ತು ನರೇಗ (MGNREGA) ಅಡಿ ಕೂಲಿ ಮೊತ್ತ ರೂ. 10000-00

**ನರೇಗ (MGNREGA) ಅಡಿ ಕೂಲಿ ಮೊತ್ತ ರೂ. 20160-00 ಮತ್ತು ಸ್ವಚ್ಛ ಭಾರತ ಮಿಷನ್ ರೂ. 12000-00**

6. ಮೋಹನ ಮತ್ತು ಚಂದ್ರು ಗೆಳೆಯರಾಗಿದ್ದು ಸೂಲಕುಂಟೆ ಪಂಚಾಯಿಗೆ ಸೇರಿದ್ದಾರೆ. ಮೋಹನ ಪರಿಶಿಷ್ಟ ಜಾತಿಗೆ ಸೇರಿದ್ದು ಹೊಸಹಳ್ಳಿ ಗ್ರಾಮದಲ್ಲಿ ವಾಸವಿದ್ದಾನೆ. ಚಂದ್ರು ಸಾಮಾನ್ಯ ವರ್ಗಕ್ಕೆ ಸೇರಿದ್ದು ಹೊಸಹಳ್ಳಿ ಗ್ರಾಮದಿಂದ 8 ಕಿ.ಮೀ. ದೂರದ ದಾಸರಹಳ್ಳಿ ಗ್ರಾಮದಲ್ಲಿ ವಾಸವಿದ್ದಾನೆ. ಮೋಹನ ಮತ್ತು ಚಂದ್ರು ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ (MGNREGA) ಯಲ್ಲಿ ಹೊಸಹಳ್ಳಿ ಗ್ರಾಮದ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ 10 ದಿನಗಳ ಕೂಲಿ ಕೆಲಸ ನಿರ್ವಹಿಸಿದ್ದು. ಮೋಹನ ಮತ್ತು ಚಂದ್ರು ಕ್ರಮವಾಗಿ ಎಷ್ಟು ಕೂಲಿ ಮೊತ್ತವನ್ನು ಪಡೆಯುತ್ತಾರೆ?

**ಅ. ರೂ. 2240-00 ಮತ್ತು ರೂ. 2464-00**

ಆ. ರೂ. 2464-00 ಮತ್ತು ರೂ. 2240-00

ಇ. ರೂ. 2240-00 ಮತ್ತು ರೂ. 2240-00

ಈ. ರೂ. 2464-00 ಮತ್ತು ರೂ. 2464-00

(ವಾಸವಿರುವ ಗ್ರಾಮದಿಂದ ಕೂಲಿ ಕಾರ್ಯ ನಿರ್ವಹಿಸುವ ಸ್ಥಳ 5 ಕಿ.ಮೀ. ವ್ಯಾಪ್ತಿಗಿಂತ ಹೆಚ್ಚು ದೂರವಿದ್ದರೆ, ಕನಿಷ್ಟ ಕೂಲಿಯ ಶೇಕಡ 10 ರಷ್ಟನ್ನು ಹೆಚ್ಚುವರಿಯಾಗಿ ಪಾವತಿಸಲಾಗುತ್ತದೆ. ಅಂಗವಿಕಲರಿಗೆ ಉದ್ಯೋಗ ನೀಡಿದರೆ ಕೂಲಿಯ ಶೇ. 10 ರಷ್ಟನ್ನು, 5 ಕಿ.ಮೀ. ಗಿಂತ ದೂರದಲ್ಲಿ ಕೂಲಿ ಒದಗಿಸಿದರೆ ಹೆಚ್ಚುವರಿಯಾಗಿ ಕೂಲಿಯ ಶೇ. 20 ರಷ್ಟನ್ನು ಪಡೆಯಲು ಅವಕಾಶವಿದೆ)

7. ಈ ಕೆಳಕಂಡ ಯಾವ ಮೂಲದಿಂದ ಗ್ರಾಮ ಪಂಚಾಯಿತಿ ಆದಾಯ ಪಡೆಯುವ ಅಧಿಕಾರ ಹೊಂದಿಲ್ಲ?

ಅ. ಗ್ರಾಮ ಪಂಚಾಯಿತಿ ಅಧಿಕಾರದಿಂದ ಪಡೆಯಬಹುದಾದ ಆದಾಯ

ಆ. ಗ್ರಾಮ ಪಂಚಾಯಿತಿ ವಿತರಿಸಿದ ಸಾಲದ ಬಡ್ಡಿ

ಇ. ಗ್ರಾಮ ಪಂಚಾಯಿತಿ ಆಸ್ತಿ

ಈ. ಗ್ರಾಮ ಪಂಚಾಯಿತಿ ಅನುದಾನ

ಆ. ಗ್ರಾಮ ಪಂಚಾಯಿತಿ ವಿತರಿಸಿದ ಸಾಲದ ಬಡ್ಡಿ

8. ಜಿಲ್ಲಾ ಪಂಚಾಯಿತಿಗಳಲ್ಲಿ ಆಯವ್ಯಯ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯತ್ ನಿಧಿಯನ್ನು ಎಷ್ಟು ವರ್ಗಗಳಾಗಿ ವಿಂಗಡಿಸಿದೆ?

ಅ. 3 ವರ್ಗಗಳು

ಆ. 2 ವರ್ಗಗಳು

ಇ. 4 ವರ್ಗಗಳು

ಈ. 5 ವರ್ಗಗಳು

3 ವರ್ಗಗಳು

(ಜಿಲ್ಲಾ ಪಂಚಾಯತ್ ನಿಧಿ-1: ಕೇಂದ್ರ ಸರ್ಕಾರವು ರಾಜ್ಯ ಸಂಚಿತ ನಿಧಿಯ ಮೂಲಕ ಬಿಡುಗಡೆ ಮಾಡುವ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳ ಅನುದಾನ. ಜಿಲ್ಲಾ ಪಂಚಾಯತ್ ನಿಧಿ-2: ರಾಜ್ಯ

www.karunaduexams.com

ಸರ್ಕಾರವು ತನ್ನ ಸಂಚಿತ ನಿಧಿಯಿಂದ ರಾಜ್ಯ ಯೋಜನಾ ಹಾಗೂ ಯೋಜನೇತರ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡುವ ಅನುದಾನ ಮತ್ತು ಜಿಲ್ಲಾ ಪಂಚಾಯತ್ ನಿಧಿ-3: ಜಿಲ್ಲಾ ಪಂಚಾಯಿತಿಗೆ ತನ್ನ ಸ್ವಂತ ಸಂಪನ್ಮೂಲಗಳಿಂದ ಬರುವ ಹಣ)

9. ಭಾರತದ ಸಂವಿಧಾನದ ಅನುಸಾರ ಕೇಂದ್ರ ಸರ್ಕಾರವು ತಾನು ವಿಧಿಸಿ, ಸಂಗ್ರಹಿಸಿದ ತೆರಿಗೆಗಳ ನಿವ್ವಳ ಮೊತ್ತವನ್ನು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳೊಡನೆ ಹಂಚಿಕೆ ಮಾಡಲು ಕೇಂದ್ರ ಹಣಕಾಸು ಆಯೋಗವನ್ನು ರಚಿಸಲು ಅವಕಾಶ ಕಲ್ಪಿಸಲಾಗಿದೆ, ಇದು ಯಾವ ಅನುಚ್ಛೇಧದಲ್ಲಿ ಅಡಕವಾಗಿದೆ?
   ಅ. ಭಾರತ ಸಂವಿಧಾನದ ಅನುಚ್ಛೇಧ 280
   ಆ. ಭಾರತ ಸಂವಿಧಾನದ ಅನುಚ್ಛೇಧ 290
   ಇ. ಭಾರತ ಸಂವಿಧಾನದ ಅನುಚ್ಛೇಧ 285
   ಈ. ಭಾರತ ಸಂವಿಧಾನದ ಅನುಚ್ಛೇಧ 301
   ಅ. ಭಾರತ ಸಂವಿಧಾನದ ಅನುಚ್ಛೇಧ 280

10. ಪ್ರಸ್ತುತ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಜಾರಿಯಲ್ಲಿರುವುದು ಎಷ್ಟನೇ ಕೇಂದ್ರ ಹಣಕಾಸು ಆಯೋಗದ ಶಿಫಾರಸ್ಸುಗಳು?
    ಅ. 11 ನೇ ಕೇಂದ್ರ ಹಣಕಾಸು ಆಯೋಗ
    ಆ. 12 ನೇ ಕೇಂದ್ರ ಹಣಕಾಸು ಆಯೋಗ
    ಇ. 13 ನೇ ಕೇಂದ್ರ ಹಣಕಾಸು ಆಯೋಗ
    ಈ. 14 ನೇ ಕೇಂದ್ರ ಹಣಕಾಸು ಆಯೋಗ
    ಈ. 14 ನೇ ಕೇಂದ್ರ ಹಣಕಾಸು ಆಯೋಗ
    (ಭಾರತದಲ್ಲಿ ದಿನಾಂಕ 22-11-1951 ರಂದು ಪ್ರಥಮ ಕೇಂದ್ರ ಹಣಕಾಸು ಆಯೋಗವನ್ನು ರಚಿಸಲಾಯಿತು. ಪ್ರಸ್ತುತ ಜಾರಿಯಲ್ಲಿರುವುದು 14ನೇ ಹಣಕಾಸು ಆಯೋಗದ ಶಿಫಾರಸ್ಸುಗಳು 01—04-2015 ರಿಂದ 31-03-2020 ರವರೆಗೆ ಅನ್ವಯವಾಗಲಿದೆ).

www.karunaduexams.com